# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

ಸಂಖ್ಯೆ: ಕಸಂವಿ/ಕ.ರಾ.ವೇ/ಬೋಧಕ ಬೋಧಕೇತರ ಹುದ್ದೆ ನೇ 17/2016–17 ದಿನಾಂಕ: 08.11.2017

## ನೇಮಕಾತಿ ಅಧಿಸೂಚನೆ

ವಿಷಯ: ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳ ನೇಮಕಾತಿ ಬಗೆಗೆ.

ಉಲ್ಲೇಖ:
1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ 40 ನೇ ಸಭೆಯ ನಿರ್ಣಯ, ದಿನಾಂಕ: 27.10.2017.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 572 ಯುಎನ್ಇ 2014, ದಿನಾಂಕ: 27.09.2017
3. ಸರ್ಕಾರದ ಪತ್ರ ಸಂಖ್ಯೆ: ಇಡಿ 136 ಯುಎನ್ಇ 2017, ದಿನಾಂಕ: 17.07.2017
4. ಮಾನ್ಯ ಕುಲಪತಿಗಳ ಒಪ್ಪಿಗೆ ಕಂಡಿಕೆ ಸಂಖ್ಯೆ: 144, ದಿನಾಂಕ: 31.10.2017

*****

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಖಾಲಿಯಿರುವ ಹುದ್ದೆಗಳಲ್ಲಿ ಸಂವಿಧಾನ ಅನುಚ್ಛೇದ 371ಜೆ (ಹೈದರಾಬಾದ್ ಕರ್ನಾಟಕ) ಅಡಿಯಲ್ಲಿ ಮೀಸಲಿರಿಸಿದ ಈ ಕೆಳಕಂಡ ರಾಜ್ಯ ವೇತನ ಶ್ರೇಣಿಯ ಬೋಧಕೇತರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ 08 (ಎಂಟು) ಸೆಟ್‌ಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. (ವಿಶ್ವವಿದ್ಯಾಲಯದಿಂದ/ ಅಂತರ್ಜಾಲದಿಂದ ಒಂದು ಅರ್ಜಿಯನ್ನು ಪಡೆದು ಉಳಿದ 07 ಪ್ರತಿಗಳನ್ನು ಛಾಯಾಪ್ರತಿ ಮಾಡಿಕೊಂಡು ವಿವರಗಳನ್ನು ಭರ್ತಿ ಮಾಡಿ ಸಲ್ಲಿಸುವುದು.)

**ಅರ್ಜಿ ಸಲ್ಲಿಸಲು ಕಡೆಯ ದಿನ: 29.11.2017**

| ಕ್ರ. ಸಂ. | ಹುದ್ದೆಯ ಹೆಸರು ಮತ್ತು ವೇತನಶ್ರೇಣಿ | ವಿದ್ಯಾರ್ಹತೆ | ಹುದ್ದೆಗಳ ಸಂಖ್ಯೆ | ಮೀಸಲಾತಿ |
|---|---|---|---|---|
| 01. | ಯೋಜನಾ ಸಹಾಯಕರು (ಶೈಕ್ಷಣಿಕ) ರೂ. 21600–40050 | Must be a holder of Master's Degree in relevant subject with 55% of marks. Must have studied Sanskrit as optional subject in the Degree course. Preference being given to the candidates who have cleared National Eligibility Test and acquired Vidwath in Traditional System in the field of specialization. | 02 | ಪ.ಜಾ. – 01 371ಜೆ (ಹೈ.ಕ) ಪ.ಪಂ.–01 371ಜೆ (ಹೈ.ಕ) |
| 02. | ಸಿಸ್ಟಂ ಅನಲಿಸ್ಟ್ ರೂ. 36300–53850 | Must be a holder of M.Tech/M.E. in Computer Science in first class of a recognized university. Preference being given for having 5 years experience in a reputed Multinational Company and possessing Vidwath Degree in any Traditional System in the field of Specializtion. | 01 | ಸಾಮಾನ್ಯ – 01** 371ಜೆ (ಹೈ.ಕ) |
| 03. | ಹಿರಿಯ ಸಹಾಯಕರು ರೂ. 20000–36300 | Holder of Degree of a recognized University. Must have studied Sanskrit as a Language in Degree course. Must have put in minimum 5 years of service in the cadre of Assistant. Preference being given to those who have passed Sahitya Examination held in Traditional System. | 01 | ಸಾಮಾನ್ಯ – 01** 371ಜೆ (ಹೈ.ಕ) |

| 04. | ಗ್ರಂಥಾಲಯ ಸಹಾಯಕರು ರೂ. 16000–29600 | Must be a holder of degree in Library Information Science from a recognized university. Must have studied Sanskrit Language in SSLC/PUC course and also passed Prasidda Sanskrit Pariksha in Sahitya held in Traditional System. | 01 | 371ಜೆ (ಹೈ.ಕ) ಸಾಮಾನ್ಯ – 01** |
|---|---|---|---|---|
| 05. | ಡಾಟಾ ಎಂಟ್ರಿ ಆಪರೇಟರ್ R.14550- 26700 | Must be a holder of BCA or Computer Science as one of the subjects in B.Sc. degree of a recognized university. Must have studied Sanskrit in Degree and also passed Prasidda Sanskrit Pariksha in Sahitya held in traditional system. | 01 | ಸಾಮಾನ್ಯ – 01** 371ಜೆ (ಹೈ.ಕ) |
| 06. | ಟೆಲಿಫೋನ್ ಆಪರೇಟರ್ ರೂ. 11600–21000 | Must have passed SSLC or equivalent examination. Should have studied Sanskrit Language in SSLC. Must have undergone training in PABX. Preference given to physically challenged. | 01 | 371ಜೆ (ಹೈ.ಕ) ಸಾಮಾನ್ಯ – 01** |

**Note:** **As it is a single sanctioned post in the respective cadre, this is treated as unreserved post as per Government Order issued thereof.

1. ಸಂಕ್ಷಿಪ್ತ ವಿವರಣೆ: ಸಂವಿಧಾನ ಅನುಚ್ಛೇದ 371ಜೆ (ಹೈ.ಕ)–ಹೈದರಾಬಾದ್ ಕರ್ನಾಟಕ ಪ್ರಾದೇಶಿಕ ಮೀಸಲಾತಿ.

2. ಆಯ್ಕೆ ವಿಧಾನ: ರಾಜ್ಯ ವೇತನ ಶ್ರೇಣಿಯ ಬೋಧಕೇತರ ವೃಂದ ಎ, ಬಿ ಮತ್ತು ಸಿ ವರ್ಗದ ಮತ್ತು ರಾಜ್ಯ ವೇತನ ಶ್ರೇಣಿಯ ಯೋಜನಾ ಸಹಾಯಕರು ಹುದ್ದೆಗಳನ್ನು ಭರ್ತಿಮಾಡಬೇಕಾದ ಸಂದರ್ಭದಲ್ಲಿ ಈ ಕೆಳಕಂಡಂತೆ ಲಿಖಿತ ಪರೀಕ್ಷೆ ಶೇ.50 ರಷ್ಟು ಅಂಕಗಳು ಮತ್ತು ಸಂದರ್ಶನ ಶೇ. 50 ರಷ್ಟು ಅಂಕಗಳಿಗೆ ನಡೆಸಿ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು.

ಲಿಖಿತ ಪರೀಕ್ಷೆ: ಲಿಖಿತ ಪರೀಕ್ಷೆಯು ಬಹುಆಯ್ಕೆಯ ಪ್ರಶ್ನೆಗಳನ್ನು ಹೊಂದಿದ್ದು, 04 ವಿಕಲ್ಪಗಳನ್ನು ನೀಡಲಾಗಿರುತ್ತದೆ. ಅವುಗಳಲ್ಲಿ ಸರಿಯಾದ ಒಂದನ್ನು ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ನಿಂದ ಗುರುತು ಹಾಕಬೇಕಾಗಿರುತ್ತದೆ. ಲಿಖಿತ ಪರೀಕ್ಷೆಯಲ್ಲಿ ಕನಿಷ್ಟ 35% ಅಂಕಗಳನ್ನು ಪಡೆದಲ್ಲಿ ಮುಂದಿನ ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲಾಗುವುದು.

ಅ) ಸಿಸ್ಟಮ್ ಅನಲಿಸ್ಟ್, ಮತ್ತು ಯೋಜನಾ ಸಹಾಯಕರು ಹುದ್ದೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಪತ್ರಿಕೆ ಮತ್ತು ಪಠ್ಯಕ್ರಮವನ್ನು ನಿಗಧಿಸಲಾಗಿದೆ.

| ಕ್ರಸಂ | ಪತ್ರಿಕೆ ಮತ್ತು ವಿಷಯ (ಪದವಿ ಮಟ್ಟದ ಜ್ಞಾನ) | ಅಂಕಗಳು |
|---|---|---|
| 01 | ಸಾಮಾನ್ಯ ಪತ್ರಿಕೆ (ಕನ್ನಡ, ಇಂಗ್ಲೀಷ್ ಮತ್ತು ಸಂಸ್ಕೃತ ಭಾಷಾ ಜ್ಞಾನ, ಸಾಮಾನ್ಯ ಜ್ಞಾನ, ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವದ ಪ್ರಚಲಿತ ವಿದ್ಯಮಾನಗಳು, ಬೌದ್ಧಿಕ ಸಾಮರ್ಥ್ಯ ಮತ್ತು ಕಂಪ್ಯೂಟರ್ ಜ್ಞಾನ) | 50 |
| 02 | ಸಂಬಂಧಪಟ್ಟ ವಿಷಯ ಜ್ಞಾನಕ್ಕೆ ಮತ್ತು ಸಂಶೋಧನೆಗೆ ಸಂಬಂಧಿಸಿದಂತೆ | 50 |
| ಒಟ್ಟು ಅಂಕಗಳು | | **100** |

ಆ) ಹಿರಿಯ ಸಹಾಯಕರು, ಡಾಟಾ ಎಂಟ್ರಿ ಆಪರೇಟರ್ ಮತ್ತು ಟೆಲಿಪೋನ್ ಆಪರೇಟರ್ ಹುದ್ದೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಪತ್ರಿಕೆ ಮತ್ತು ಪಠ್ಯಕ್ರಮವನ್ನು ನಿಗಧಿಪಡಿಸಲಾಗಿದೆ.

| ಕ್ರ.ಸಂ | ಪತ್ರಿಕೆ ಮತ್ತು ವಿಷಯ (ಎಸ್.ಎಸ್.ಎಲ್.ಸಿ ಮಟ್ಟದ ಜ್ಞಾನ) | ಅಂಕಗಳು |
|---|---|---|
| 01 | ಸಾಮಾನ್ಯ ಪತ್ರಿಕೆ (ಕನ್ನಡ, ಇಂಗ್ಲೀಷ್ ಮತ್ತು ಸಂಸ್ಕೃತ ಭಾಷಾ ಜ್ಞಾನ, ಸಾಮಾನ್ಯ ಜ್ಞಾನ, ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವದ ಪ್ರಚಲಿತ ವಿದ್ಯಾಮಾನಗಳು, ಬೌದ್ಧಿಕ ಸಾಮರ್ಥ್ಯ ಮತ್ತು ಕಂಪ್ಯೂಟರ್ ಜ್ಞಾನ) | 50 |

ಇ) ಗ್ರಂಥಾಲಯ ಸಹಾಯಕರು ಹುದ್ದೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಪತ್ರಿಕೆ ಮತ್ತು ಪಠ್ಯಕ್ರಮವನ್ನು ನಿಗಧಿಪಡಿಸಲಾಗಿದೆ.

| ಕ್ರ.ಸಂ | ಪತ್ರಿಕೆ ಮತ್ತು ವಿಷಯ (ಎಸ್.ಎಸ್.ಎಲ್.ಸಿ ಮಟ್ಟದ ಜ್ಞಾನ) | ಅಂಕಗಳು |
|---|---|---|
| 01 | ಸಾಮಾನ್ಯ ಪತ್ರಿಕೆ (ಕನ್ನಡ, ಇಂಗ್ಲೀಷ್ ಮತ್ತು ಸಂಸ್ಕೃತ ಭಾಷಾ ಜ್ಞಾನ, ಸಾಮಾನ್ಯ ಜ್ಞಾನ, ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವದ ಪ್ರಚಲಿತ ವಿದ್ಯಾಮಾನಗಳು, ಬೌದ್ಧಿಕ ಸಾಮರ್ಥ್ಯ ಮತ್ತು ಕಂಪ್ಯೂಟರ್ ಜ್ಞಾನ) | 50 |
| 02 | ಸಂಬಂಧಪಟ್ಟ ವಿಷಯ ಜ್ಞಾನಕ್ಕೆ ಸಂಬಂಧಿಸಿದಂತೆ | 50 |
| ಒಟ್ಟು ಅಂಕಗಳು | | **100** |

ಸಂದರ್ಶನ : ವ್ಯಕ್ತಿತ್ವ ಪರೀಕ್ಷೆಯು ಅಭ್ಯರ್ಥಿಗಳ ವೈಯಕ್ತಿಕ ಗುಣಮಟ್ಟ ಮತ್ತು ಸಿವಿಲ್ ಸೇವೆಗಳಿಗೆ ಸೂಕ್ತರೇ ಎಂಬ ಬಗ್ಗೆ ಅಂದರೆ ನಾಯಕತ್ವದ ಗುಣ, ತೀರ್ಮಾನ ತೆಗೆದುಕೊಳ್ಳುವ ಸಾಮರ್ಥ್ಯ, ವಿವಿಧ ಮತ್ತು ಆಳವಾದ ಆಸಕ್ತಿ, ಒಂದು ಗುಂಪಿನಲ್ಲಿ ಕೆಲಸ ಮಾಡುವ ಸಾಮರ್ಥ್ಯ ಮತ್ತು ಪ್ರೇರಣಾ ಕೌಶಲ್ಯ, ತಾರ್ಕಿಕ ಯೋಚನಾ ಸಾಮರ್ಥ್ಯ, ಭಾಷಾತಜ್ಞತೆ ಮತ್ತು ಸಂವಹನ ಹಾಗೂ ಸಂಬಂಧಿಸಿದ ವಿಷಯ ಜ್ಞಾನಗಳ ಬಗ್ಗೆ ನಿರ್ಧರಿಸುತ್ತದೆ.

ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ 1:5 ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಕರೆಯಲಾಗುವುದು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಅಭ್ಯರ್ಥಿಯು ಲಿಖಿತ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಜೇಷ್ಠತೆ (Merit) ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿಯನ್ವಯ ಲಭ್ಯವಿರುವ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗನುಗುಣವಾಗಿ ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಕರೆಯಲಾಗುವುದು.

ಆಯ್ಕೆ ವಿಧಾನ: ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಲ್ಲಿ ಶೇ. 50 ಅಂಕಗಳು ಮತ್ತು ವ್ಯಕ್ತಿತ್ವ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಜೇಷ್ಠತೆ ಪಟ್ಟಿಯನ್ನಾಧರಿಸಿ ಆಯ್ಕೆ ಪ್ರಕ್ರಿಯೆಗಾಗಿ ಪರಿಗಣಿಸಲಾಗುವುದು.

3. ವಯೋಮಿತಿ: ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು–

| | |
|---|---|
| (ಅ) ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರಬೇಕು. | (ಆ) ಗರಿಷ್ಠ ವಯೋಮಿತಿ:<br>(i) ಸಾಮಾನ್ಯ ವರ್ಗ – 35 ವರ್ಷ (ii) ಇತರೆ ಹಿಂದುಳಿದ ವರ್ಗ – 38 ವರ್ಷ<br>(iii) ಪ.ಜಾ/ಪ.ಪಂ/ಪ್ರವರ್ಗ–1 – 40 ವರ್ಷ |

ಈ ಮುಂದಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಈ ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು.

1) ಅಭ್ಯರ್ಥಿಯು ಕೇಂದ್ರ / ರಾಜ್ಯ ಸರ್ಕಾರದ ಅಥವಾ ಸರ್ಕಾರದ ಸ್ವಾಮ್ಯ / ನಿಯಂತ್ರಣದಲ್ಲಿರುವ ಸ್ಥಳೀಯ ಪ್ರಾಧಿಕಾರ / ನಿಗಮಗಳಲ್ಲಿ ಹುದ್ದೆ ಹೊಂದಿರುವ / ಹಿಂದೆ ಹೊಂದಿದ್ದಲ್ಲಿ ಗರಿಷ್ಠ ವಯೋಮಿತಿಯನ್ನು ಅವನು/ ಅವಳು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ / ಹಿಂದೆ ಸಲ್ಲಿಸಿದ್ದರೋ ಅಷ್ಟು ವರ್ಷಗಳು ಅಥವಾ 5 (ಐದು) ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.
2) ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಸಶಸ್ತ್ರ ದಳಗಳಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಅಷ್ಟು ವರ್ಷಗಳು.
3) ಅಭ್ಯರ್ಥಿಯು ನ್ಯಾಷನಲ್ ಕೆಡೆಟ್ ಕಾರ್ಪ್ಸ್‌ನಲ್ಲಿ ಪೂರ್ಣಕಾಲದ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿ ಬಿಡುಗಡೆಯಾಗಿರುವ ವ್ಯಕ್ತಿಯಾಗಿದ್ದರೆ ಅಂಥ ಕೆಡೆಟ್ ಪರಿವೀಕ್ಷಕನಾಗಿ ಸೇವೆ ಸಲ್ಲಿಸಿದಷ್ಟು ವರ್ಷಗಳು.
4) ಅಭ್ಯರ್ಥಿಯು ಅಂಗವಿಕಲನಾಗಿದ್ದರೆ 10 ವರ್ಷಗಳು.
5) ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ 10 ವರ್ಷಗಳು.
6) ವಿಶ್ವವಿದ್ಯಾಲಯದ ಸೇವಾ ನೇಮಕಾತಿಗೆ ಪರೀಕ್ಷೆ ಅಥವಾ ಆಯ್ಕೆ ವಿಧಾನ ನಡೆದಾಗ ಒಂದು ಪಕ್ಷ ಯಾವುದೇ ವಿಶ್ವವಿದ್ಯಾಲಯದ ನೌಕರರು ಆ ದಿನಾಂಕದಂದು ವಾಸ್ತವವಾಗಿ ನೇಮಕ ಹೊಂದಿದ್ದಲ್ಲಿ ಅಥವಾ ವಿಶ್ವವಿದ್ಯಾಲಯದ ಸೇವೆಯಲ್ಲಿ ಒಂದು ವರ್ಷಕ್ಕೆ ಕಡಿಮೆಯಿಲ್ಲದಂತೆ ನಿರಂತರವಾಗಿ ಸೇವೆ ಸಲ್ಲಿಸಿದ್ದು 40 ವರ್ಷಕ್ಕೂ ಕಡಿಮೆ ವಯಸ್ಸು ಇದ್ದಲ್ಲಿ, ಅಂತಹ ಅಭ್ಯರ್ಥಿಗಳು ಸಹ ನೇಮಕಾತಿಗೆ ಅರ್ಹರಾಗಿರುತ್ತಾರೆ.
7) ಅಭ್ಯರ್ಥಿಯು ಮಹಿಳೆಯಾಗಿದ್ದಲ್ಲಿ 5 ವರ್ಷಗಳು.

4. ಮೀಸಲಾತಿ ಬಯಸುವ ಅಭ್ಯರ್ಥಿಗಳು ರಾಜ್ಯ ಸರ್ಕಾರವು ನಿಗದಿಪಡಿಸಿರುವ ನಮೂನೆಗಳಲ್ಲಿ ಮೀಸಲಾತಿ ಪ್ರಮಾಣಪತ್ರವನ್ನು ಸಕ್ಷಮ ಪ್ರಾಧಿಕಾರಗಳಿಂದ ಇತ್ತೀಚೆಗೆ ಪಡೆದು ಸಲ್ಲಿಸಬೇಕಾಗಿರುತ್ತದೆ.

1) ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯ 1ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಈ ಪ್ರಮಾಣಪತ್ರಗಳನ್ನು ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಿಂಧುವಾದದ್ದು ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸತಕ್ಕದ್ದು. ಗ್ರಾಮೀಣ ಮೀಸಲಾತಿಗೆ ಸಂಬಂಧಿಸಿದಂತೆ ನಮೂನೆ-2ರಲ್ಲಿ ಪ್ರಮಾಣಪತ್ರವನ್ನು ಅಭ್ಯರ್ಥಿಗಳು ವ್ಯಾಸಂಗ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಅದಕ್ಕೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲುರುಜು ಪಡೆದಿರತಕ್ಕದ್ದು. ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಗಾಗಿ ವಿಶ್ವವಿದ್ಯಾಲಯವು ಸೂಚನೆ ನೀಡಿದಾಗ ಸಲ್ಲಿಸತಕ್ಕದ್ದು.
2) ಅಂಗವಿಕಲ ಅಭ್ಯರ್ಥಿ–ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: ಸಿಆಸುಇ 115 ಸೇನೆನಿ 2005, ದಿನಾಂಕ: 19.11.2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಜಿಲ್ಲಾಮಟ್ಟದ ವೈದ್ಯಕೀಯ ಮಂಡಳಿಯಿಂದ ಪ್ರಮಾಣಪತ್ರವನ್ನು ಪಡೆದಿರಬೇಕು. ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣಪತ್ರಗಳನ್ನು ಪರಿಗಣಿಸಲು ಬರುವುದಿಲ್ಲ.
3) ಯೋಜನೆಗಳಿಂದ ನಿರಾಶ್ರಿತ ಅಭ್ಯರ್ಥಿ–ಯೋಜನೆಗಳಿಂದ ನಿರ್ವಸಿತರಾದ ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರ್‌ರವರು ನೀಡಿದ ಪ್ರಮಾಣಪತ್ರದ ಒಂದು ಫೋಟೋ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.
4) 371ಜೆ– ಹೈದರಬಾದ್ ಕರ್ನಾಟಕ ಪ್ರಾದೇಶಿಕ ಮೀಸಲಾತಿಯ ಅನುಬಂಧ 'ಎ' ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು.
5) ಅಭ್ಯರ್ಥಿಗಳು ಯಾವುದೇ ವರ್ಗದಡಿ ಮೀಸಲಾತಿ ಕೋರಿದಲ್ಲಿ, ಮೀಸಲಾತಿಯ ಪ್ರಮಾಣಪತ್ರದ ಒಂದು ಫೋಟೋ ಪ್ರತಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

5. ಸಾಮಾನ್ಯ ಮಾಹಿತಿಗಳು ಮತ್ತು ಸೂಚನೆಗಳು:

1) ನಿಗದಿತ ಅರ್ಜಿ ನಮೂನೆಗಳನ್ನು ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ಇವರಿಂದ ಈ ಕೆಳಕಂಡಂತೆ ಶುಲ್ಕವನ್ನು ಡಿ.ಡಿ. ಮೂಲಕ 'ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು' ಇವರ ಹೆಸರಿಗೆ ಪಾವತಿಸಿ ಪಡೆಯಬಹುದಾಗಿದೆ ಹಾಗೂ ಈ ಅಧಿಸೂಚನೆಯ ಪ್ರತಿ ಮತ್ತು ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ಅಂತರ್ಜಾಲ (**www.ksu.ac.in**)ದಿಂದಲೂ ಪಡೆಯಬಹುದು. ಅಂತಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯೊಂದಿಗೆ ಡಿ.ಡಿ.ಯನ್ನು ಕಡ್ಡಾಯವಾಗಿ ಸಲ್ಲಿಸುವುದು. ಶುಲ್ಕದ ವಿವರ ಈ ಕೆಳಕಂಡಂತಿದೆ:

| ಹುದ್ದೆಯ ವಿವರ | ಎಲ್ಲಾ ವರ್ಗಗಳ ಅಭ್ಯರ್ಥಿಗಳು ಅರ್ಜಿ ಪಡೆಯಲು ಪಾವತಿಸಬೇಕಾದ ಶುಲ್ಕ | ಎಲ್ಲಾ ವರ್ಗಗಳ ಅಭ್ಯರ್ಥಿಗಳು ಅಂಚೆಯ ಮೂಲಕ ಪಡೆಯಲು ಪಾವತಿಸಬೇಕಾದ ಹೆಚ್ಚಿನ ಶುಲ್ಕ | ಭರ್ತಿ ಮಾಡಿದ ಅರ್ಜಿಯ ಜೊತೆ ಸಲ್ಲಿಸಬೇಕಾದ ಶುಲ್ಕ |
|---|---|---|---|
| ಎಲ್ಲಾ ಹುದ್ದೆಗಳಿಗೆ | ರೂ. 200/- | ರೂ. 50/- | ರೂ. 400/- (ಪ.ಜಾ., ಪ.ಪಂ. ಮತ್ತು ಪ್ರವರ್ಗ 1ರ ಅಭ್ಯರ್ಥಿಗಳಿಗೆ ರೂ. 200/- ಗಳನ್ನು ನಿಗದಿಪಡಿಸಲಾಗಿದೆ) |

2) ನಿಗದಿತ ಅರ್ಜಿ ಶುಲ್ಕ ಪಾವತಿಸಿದ ಡಿ.ಡಿ.ಯನ್ನು ಸಲ್ಲಿಸಿದ್ದಲ್ಲಿ/ಹಾಜರುಪಡಿಸಿದಲ್ಲಿ ಅರ್ಜಿಗಳನ್ನು ನೇರವಾಗಿ / ಅಂಚೆಯ ಮೂಲಕ ಕಳುಹಿಸಲಾಗುವುದು.

3) ಅರ್ಜಿಗಳನ್ನು ಅಂಚೆಯ ಮೂಲಕ ಪಡೆಯಬಯಸುವವರು 6"x12" ಅಳತೆಯ ಸ್ವವಿಳಾಸ ಹೊಂದಿದ ಲಕೋಟೆಯೊಂದಿಗೆ 'ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು' ಇವರ ಹೆಸರಿಗೆ ಪಡೆದುಕೊಂಡ ಡಿ.ಡಿ.ಯನ್ನು 'ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018' ಇವರಿಗೆ ಕಳುಹಿಸಬೇಕು.

4) ಎಂಟು ಸೆಟ್‌ಗಳಲ್ಲಿ ಸಲ್ಲಿಸಿದ ಅರ್ಜಿಗಳು ಹಾಗೂ ಅವುಗಳಿಗೆ ಲಗತ್ತಿಸಿದ ವಿದ್ಯಾರ್ಹತೆ ಹಾಗೂ ಇತರೆ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು ಹಿಂತಿರುಗಿಸಲಾಗುವುದಿಲ್ಲ.

5) ಪ್ರತ್ಯೇಕ ಹುದ್ದೆಗಳಿಗೆ ಬೇರೆ ಬೇರೆ ಅರ್ಜಿಗಳನ್ನು ಸಲ್ಲಿಸಬೇಕು.

6) ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗುವುದು ಹಾಗೂ ಸೇವೆಗೆ ಸೇರಿಕೊಳ್ಳುವ ಸಮಯ ಅಥವಾ ಇನ್ನಾವುದೇ ಸಂದರ್ಭದಲ್ಲಾದರೂ ವಿಶ್ವವಿದ್ಯಾಲಯದ ವತಿಯಿಂದ ಯಾವುದೇ ರೀತಿಯ ಟಿ.ಎ. / ಡಿ.ಎ. / ಅಥವಾ ಇನ್ನಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ.

7) ಅಭ್ಯರ್ಥಿಗಳು 08 (ಎಂಟು) ಸೆಟ್‌ಗಳಲ್ಲಿ ಅರ್ಜಿಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಅರ್ಜಿಗಳು ಅಪೂರ್ಣವಾಗಿದ್ದರೆ, ಅವುಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಲಾಗುವುದು.

8) ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ: 29.11.2017 ರಂದು ಸಂಜೆ 5.30 ಗಂಟೆಯ ಒಳಗೆ 'ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು' ಇವರಿಗೆ ತಲುಪುವಂತೆ ಕಳುಹಿಸಬೇಕು.

9) ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲಾಗುತ್ತಿದೆ ಎಂಬುದನ್ನು ದಪ್ಪ ಅಕ್ಷರಗಳಲ್ಲಿ ಕಡ್ಡಾಯವಾಗಿ ನಮೂದಿಸಿರಬೇಕು. ಅಂತರ್ಜಾಲದ ಮೂಲಕ ಅರ್ಜಿ ಪಡೆದು ಸಲ್ಲಿಸುವ ಅಭ್ಯರ್ಥಿಗಳು ಲಕೋಟೆಯ ಮೇಲೆ 'ಅಂತರ್ಜಾಲದಿಂದ ಪಡೆದ ಅರ್ಜಿ' ಎಂದೂ ಸಹ ನಮೂದಿಸುವುದು.

10) ಉದ್ಯೋಗದಲ್ಲಿರುವವರು ಅರ್ಜಿಗಳನ್ನು ತಮ್ಮ ಉದ್ಯೋಗದಾತರ ಮೂಲಕ ನಿಗದಿತ ಅಂತಿಮ ದಿನಾಂಕದಂದು ಅಥವಾ ಅದಕ್ಕೂ ಮುನ್ನ ಕಳುಹಿಸಬೇಕು.

11) ಮೀಸಲಾತಿಯ ಸೌಲಭ್ಯವನ್ನು ಪಡೆಯ ಬಯಸುವ ಅಭ್ಯರ್ಥಿಗಳು ಮೀಸಲಾತಿ ಪ್ರಮಾಣಪತ್ರವನ್ನು ನೀಡಲು ಅಧಿಕಾರ ಹೊಂದಿರುವ ಸಕ್ಷಮ ಪ್ರಾಧಿಕಾರಿಗಳಿಂದ ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣಪತ್ರ ಪಡೆದು ಲಗತ್ತಿಸಬೇಕು. ವರ್ಗ-Iಅನ್ನು ಹೊರತುಪಡಿಸಿ, ಇತರೆ ವರ್ಗದ (OBC) ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು, ನಿಗದಿತ ನಮೂನೆಯಲ್ಲಿ ಚಾಲ್ತಿಯಲ್ಲಿರುವ ಜಾತಿ ಹಾಗೂ ಕುಟುಂಬ ಆದಾಯದ ಪ್ರಮಾಣಪತ್ರವನ್ನು ಸಲ್ಲಿಸಬೇಕು.

12) ಆಯ್ಕೆಯಾದ ಅಭ್ಯರ್ಥಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಎಲ್ಲಿಯಾದರೂ ಸೇವೆ ಸಲ್ಲಿಸಲು ಸಿದ್ಧರಾಗಿರಬೇಕು.

13) ಆಯ್ಕೆಯಾದ ಅಭ್ಯರ್ಥಿಗಳು ನಿಯಮಾನುಸಾರ ಎರಡು ವರ್ಷಗಳ ಪ್ರೊಬೇಷನರಿ ಅವಧಿಯಲ್ಲಿರುತ್ತಾರೆ.

14) ಜಾಹೀರಾತು ನೀಡಿದ ಹುದ್ದೆಗಳನ್ನು ಭರ್ತಿ ಮಾಡುವ ಅಥವಾ ಮಾಡದಿರುವ ಅಧಿಕಾರವನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿರುತ್ತದೆ.

15) ನೇರ ಅಥವಾ ಪರೋಕ್ಷ ಸ್ವರೂಪದ ಶಿಫಾರಸ್ಸುಗಳ ಅಭ್ಯರ್ಥಿಯನ್ನು ಅನರ್ಹಗೊಳಿಸಲಾಗುತ್ತದೆ.

16) ಅಭ್ಯರ್ಥಿಯ ಅರ್ಹತೆ, ಜ್ಯೇಷ್ಠತೆ, ಮೀಸಲಾತಿ ಇತ್ಯಾದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರವೇ ಸಂಬಂಧಿತ ಅರ್ಹ ಅಭ್ಯರ್ಥಿಗಳ ಹೆಸರುಗಳನ್ನು ಅರ್ಹತೆ ಪಟ್ಟಿಗೆ (Eligibility List) ಸೇರಿಸಲಾಗುವುದು. ಈ ಬಗ್ಗೆ ವಿಶ್ವವಿದ್ಯಾಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.

17) ಹುದ್ದೆಯ ನೇಮಕಾತಿಗೆ ಹೊರಡಿಸಿರುವ ಅಧಿಸೂಚನೆಯನ್ವಯ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕಡೆಯ ದಿನಾಂಕದಂದು ಅಭ್ಯರ್ಥಿಗಳು ಹುದ್ದೆಗೆ ನಿಗದಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆಯನ್ನು ಹೊಂದಿರಬೇಕು.

18) ಕೇಳಿರುವ ದಾಖಲಾತಿಗಳನ್ನು ನೀಡದ ಅಥವಾ ಅಪೂರ್ಣ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ಹಾಗೂ ಈ ಬಗ್ಗೆ ವಿಶ್ವವಿದ್ಯಾಲಯವು ಯಾವುದೇ ಪತ್ರ ವ್ಯವಹಾರ ಮಾಡದೇ ಅರ್ಜಿಯನ್ನು ತಿರಸ್ಕರಿಸಲಾಗುವುದು.

19) ಸಂದರ್ಶನಕ್ಕೆ ಕರೆಯುವ ಅಭ್ಯರ್ಥಿಗಳ ಅರ್ಹತೆಯನ್ನು ವಿಶ್ವವಿದ್ಯಾಲಯದ ಸ್ಕ್ರೀನಿಂಗ್ ಕಮಿಟಿ ನಿರ್ಧರಿಸುತ್ತದೆ.

20) ನಿಗದಿಪಡಿಸಿದಂತೆ ಪಾವತಿಸುವ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

21) ಅರ್ಜಿದಾರರು ಅಂತಿಮ ದಿನಾಂಕದವರೆಗೆ ಕಾಯದೇ ಆದಷ್ಟು ಮುಂಚಿತವಾಗಿ ಅರ್ಜಿಗಳನ್ನು ಕಳುಹಿಸಬೇಕು. ಅಂಚೆಯಿಂದ ಉಂಟಾಗಬಹುದಾದ ವಿಳಂಬಗಳಿಗೆ ವಿಶ್ವವಿದ್ಯಾಲಯವು ಜವಾಬ್ದಾರವಲ್ಲ.

22) ದಿನಾಂಕ: **01.04.2006**ರಿಂದ ರಾಷ್ಟ್ರೀಯ ಪಿಂಚಣಿ (ಅಂಶದಾಯತ್ವ) ಯೋಜನೆಯು ಜಾರಿಗೆ ಬಂದಿರುವುದರಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ನೇಮಕಗೊಳ್ಳುವ ನೌಕರರು ರಾಷ್ಟ್ರೀಯ ಪಿಂಚಣಿ ಯೋಜನೆಗೆ ಒಳಪಟ್ಟಿರುತ್ತಾರೆ.

ಆದೇಶದ ಮೇರೆಗೆ,
Sulpan
ಕುಲಸಚಿವ

ಪ್ರತಿಗಳು:

1. ಘನತೆವೆತ್ತ ಕುಲಾಧಿಪತಿಗಳ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-01 – ಮಾಹಿತಿಗಾಗಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), 7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-01
3. ಎಲ್ಲಾ ಶಾಸನಬದ್ಧ ಪ್ರಾಧಿಕಾರದ ಸದಸ್ಯರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
4. ಡೀನ್ (ಭಾಷಾ ನಿಕಾಯ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
5. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
6. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಾಲತಾಣ ಮತ್ತು ಸೂಚನಾ ಫಲಕಗಳು
7. ಕಛೇರಿ ಪ್ರತಿ
8. ರಕ್ಷತಾ ಪ್ರತಿ